ಮತ್ತೊಂದು ಮಾತನ್ನು ಹೇಳಿದ್ದಾರೆ. ಆಲೂಗಡ್ಡೆಗೆ ಅಮೋನಿಯಂ ಸಲ್ಫೇಟ್ ಬೇಕು ಎಂದು ಹೇಳಿದ್ದಾರೆ. ನಿಜ ಆಲೂಗಡ್ಡೆ ಬೆಳೆಗೆ ಹೆಚ್ಚು ಅಮೋನಿಯಂ ಸಲ್ಫೇಟ್ ಬೇಕು. ಹಾಸನ ಮತ್ತು ಕೋಲಾರ ಜಿಲ್ಲೆಯಲ್ಲಿ ಆಲೂಗಡ್ಡೆಯನ್ನು ಹೆಚ್ಚು ಬೆಳೆಯುತ್ತಾರೆ. ಈಗ ಅಮೋನಿಯಂ ಸಲ್ಫೇಟಿನ ಕೊರತೆ ನಮಗೆ ಇದೆ. ಆದರೂ ಸಹ ನಾವೂ ಹಾಸನ ಡಿಸ್ಟ್ರಿಕ್ಟಿಗೆ ಅಮೋನಿಯಂ ಸಲ್ಫೇಟ್ ಜಾಸ್ತಿ ಕೊಡುತ್ತಿದ್ದೇವೆ. ಅಲ್ಲಿಗೆ ಜಾಸ್ತಿ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ಹಾಸನ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಸ್ಟಾಕ್ ಇದ್ದರೂ ಕೂಡ ಅದನ್ನು ತಂದು ಹಾಸನ ಟೌನಿನಲ್ಲಿ ಕೊಡಬೇಕು. ಅದನ್ನು ಕಳುಹಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಒಂದು ಟನ್ನಿಗೆ ೧೭೫–೨೦೦ ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಅಮೋನಿಯಂ ಸಲ್ಫೇಟ್ ಸರ್ಕಾರಿ ಡಿಪೋಗಳಲ್ಲಿ ಸೊಸೈಟಿಗಳಲ್ಲಿ ಸಿಕ್ಕುವುದಿಲ್ಲ. ಇದು ನಮ್ಮ ಇಂಡಿಯಾದೇಶದಲ್ಲಿ ಪಂಜಾಬ್ ಮತ್ತೆ ಕೆಲವು ರಾಜ್ಯಗಳಲ್ಲಿ ೪–೬ ಪ್ರೈವೇಟ್ ಫ್ಯಾಕ್ಟರಿಗಳವರು ತಯಾರು ಮಾಡುತ್ತಾರೆ. ಆದ್ದರಿಂದ ನನ್ನ ಆತಂಕ ಏನೆಂದರೆ ಒಂದು ಟನ್ನಿಗೆ ೨೦೦ ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಆದರೆ ಕಂಟ್ರೋಲ್ ರೇಟಿಗೆ ಏತಕ್ಕೆ ಸಿಕ್ಕುವುದಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಕೇಂದ್ರ ಸರ್ಕಾರದವರು ನಮ್ಮ ಇಂಡಿಯಾದಲ್ಲಿ ತಯಾರಾಗತಕ್ಕ ಅಮೋನಿಯಂ ಸಲ್ಫೇಟ್ ಏನಿದೆ ಇದರಲ್ಲಿ ೫೦ ಪರ್ಸೆಂಟ್ ಅನ್ನು ಕಂಟ್ರೋಲ್ ಮಾಡುತ್ತಾರೆ. ಉಳಿದುದನ್ನು ಕಂಟ್ರೋಲ್ ಮಾಡುವುದಿಲ್ಲ. ಆದ್ದರಿಂದ ಹೊರಗಡೆ ಈ ಗೊಬ್ಬರ ಸಿಕ್ಕುತ್ತದೆ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕು. ಅವರಿಗೆ ಇದರ ಬಗ್ಗೆ ಹೇಳೋಣ. ಉತ್ಪತ್ತಿಯಾದಂತಹ ಗೊಬ್ಬರದಲ್ಲಿ ೫೦–೬೦ ಪರ್ಸೆಂಟ್ ಹೊರಗಡೆ ಕೊಟ್ಟು ಉಳಿದಂತಹ ೩೦–೪೦ ಪರ್ಸೆಂಟ್ ಗೊಬ್ಬರವನ್ನು ಸರ್ಕಾರದವರು ಕೋಟಾಕ್ಕೆ ಕೊಡುತ್ತಾರೆ. ಆದ್ದರಿಂದ ತೊಂದರೆ ಬರುತ್ತದೆ. ಬೇರೆ ಏಜೆಂಟ್‌ಗಳು ಹೊರಗಡೆ ಮಾರಿ ಹೆಚ್ಚು ಲಾಭ ಸಂಪಾದನೆ ಮಾಡಿರಬಹುದು. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಹಾಸನ ಜಿಲ್ಲೆಗೆ ಹೆಚ್ಚು ಗೊಬ್ಬರವನ್ನು ಕೊಡಬೇಕು. ಏತಕ್ಕೆಂದರೆ ಅಲ್ಲಿ ರೈತರು ಹೆಚ್ಚು ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಹಾಗೆಯೇ ಕೋಲಾರ ಜಿಲ್ಲೆಗೂ ಹೆಚ್ಚು ಗೊಬ್ಬರವನ್ನು ಕೊಡಬೇಕಾಗುತ್ತದೆ.

Matter under Rule 312

re : Closure of Samyukta Karnataka Bangalore Edition.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಯುಕ್ತ ಕರ್ನಾಟಕ ದಿನ ಪತ್ರಿಕೆ ಬೆಂಗಳೂರು ಆವೃತ್ತಿ ನಿಂತು ಹೋಗಿದೆ. ಪುನಃ ಇದನ್ನು ಆರಂಭಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ? ಹಿಂದಿನ ಅಧಿವೇಶನದಲ್ಲಿ ಇದರ ಬಗ್ಗೆ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ನಮಗೆ ಭರವಸೆಯನ್ನು ಕೊಟ್ಟಿದ್ದರು ಆದರೂ ಸಹ ಇನ್ನೂ ಈ ಸಂಯುಕ್ತ ಕರ್ನಾಟಕ ಬೆಂಗಳೂರಿನ ಆವೃತ್ತಿ ಆರಂಭವಾಗಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆದ್ದರಿಂದ ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಗಂಗಾಧರ್.—ಈ ಸಂಯುಕ್ತ ಕರ್ನಾಟಕ ಪತ್ರಿಕಾಲಯದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ನೌಕರ ಬೇಸರಪಟ್ಟುಕೊಂಡು ಕನ್ನಂಬಾಡಿಯಲ್ಲಿ ಬಿದ್ದು ಸತ್ತು ಹೋಗಿದ್ದಾನೆ. ಇದರ ಬಗ್ಗೆ ನಾನು ಹಿಂದೆ ಕೂಡ ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವನ ಕುಟುಂಬದವರಿಗೆ ನಿಯಮದ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಸಿ. ಎಂ ಇಬ್ರಾಹಿಂ (ಕಾರ್ಮಿಕ ಸಚಿವರು).—ಸರ್ಕಾರ ಈಗ ಸುಮಾರು ಎರಡು ತಿಂಗಳಿಂದ ಸತತವಾಗಿ ಪ್ರಯತ್ನ ಪಡುತ್ತಿದೆ. ಹೋದ ಸಲ ಈ ಸದನದಲ್ಲಿ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೂಡ ನಾನು ಕೊಟ್ಟಿದ್ದೇನೆ. ಈ ಪತ್ರಿಕೆಗೆ ಸಂಬಂಧಪಟ್ಟಂತೆ ವಿವಾದವೊಂದು ಧಾರವಾಡದ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿರುವುದರಿಂದ ಅಲ್ಲಿ ತೀರ್ಪು ಕೊಡದೆ ಇದರಲ್ಲಿ ನೇರವಾಗಿ ಸರ್ಕಾರ ಪ್ರವೇಶ

ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಲ್ಲಿ ಈ ಕೇಸು ಹೈಕೋರ್ಟಿನಲ್ಲಿ ಮುಂದುವರಿದಿದೆ. ನಾಳೆ ಹೈಕೋರ್ಟ್‌ನಲ್ಲಿ ಇದರ ಸಂಬಂಧವಾಗಿ ಒಂದು ಕೇಸು ವಿಚಾರಣೆಗೆ ಬರಲಿದೆ ಆದ್ದರಿಂದ ಈ ಪರಿಸ್ಥಿತಿಯಲ್ಲಿ ಸರ್ಕಾರ ಹೇಳಿಕೆಯನ್ನು ಕೊಡುವುದು ಸರಿಯಲ್ಲ. ನಾಳೆ ಕೋರ್ಟಿನಲ್ಲಿ ತೀರ್ಮಾನ ಕೊಟ್ಟಮೇಲೆ ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಕಾಲಾವಕಾಶವನ್ನು ನೀಡಿದರೆ ನಂತರ ಸರ್ಕಾರ ಇದರ ಬಗ್ಗೆ ಸುದೀರ್ಘವಾದ ಒಂದು ಹೇಳಿಕೆಯನ್ನು ನೀಡುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಕೇಸು ಕೋರ್ಟಿನಲ್ಲಿ ಇರುವುದನ್ನು ಹಿಂದೆ ಪ್ರಸ್ತಾಪ ಮಾಡಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರವನ್ನು ಕೊಡುವುದು ಬೇಕಾಗಿಲ್ಲ. ಸರ್ಕಾರ ಇದರ ಕಡೆ ಮನಸ್ಸು ಮಾಡಬೇಕು. ಕೋರ್ಟಿನಲ್ಲಿ ಯಾವ ಹಂತದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನಾನು ಹಿಂದೆಯೇ ಹೇಳಿದ್ದೇನೆ. ಆದ್ದರಿಂದ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮೊದಲು ಈ ಪತ್ರಿಕೆಯನ್ನು ಪ್ರಾರಂಭ ಮಾಡಿ ಎಂದು ಒಳ್ಳೆ ಗಹನವಾದ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮುಂದಿನ ಬುಧವಾರ ಈ ಸಭೆ ಸೇರತಕ್ಕ ದಿನ ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಲಿ. ಈ ಮಧ್ಯೆ ಪತ್ರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಚೇರ್‌ಮನ್.—ಮುಂದಿನ ಬುಧವಾರ ಈ ಬಗ್ಗೆ ಸರ್ಕಾರ ಏನು ಪ್ರಯತ್ನ ಮಾಡಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ.

ಶ್ರೀ ಸಿ. ಎಂ. ಇಬ್ರಾಹಿಂ —ಇದರ ಬಗ್ಗೆ ಬಹಳ ದಿವಸಗಳಿಂದ ಹೇಳಿಕೆ ಕೊಡಬೇಕು ಎನ್ನುವ ವಿಚಾರ ಇದೆ. ಇದರ ಬಗ್ಗೆ ಕೋರ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳತಕ್ಕದ್ದು ಪೆಚ್ಚು ಕಡಿಮೆ ಶುಕ್ರವಾರ ಅಥವಾ ಗುರುವಾರ ಆಗಬಹುದು. ಅದನ್ನು ನೋಡಿ ಹೇಳಿಕೆ ಕೊಡುತ್ತೇನೆ.

ಶ್ರೀ ಎಂ. ಪಿ. ನಾನಯ್ಯ.—ಕೇಸ್ ತೀರ್ಮಾನ ಮಾಡುವುದು ತಮ್ಮ ಹೇಳಿಕೆ ಕೊಡುವುದಕ್ಕೆ ಏನೂ ಅಡ್ಡಿಯಾಗಲಾರದು.

ಶ್ರೀ ಸಿ. ಎಂ. ಇಬ್ರಾಹಿಂ.—ಒಂದು ವೇಳೆ ಕೋರ್ಟಿನಲ್ಲಿ ಏನಾದರೂ ಇದರ ಬಗ್ಗೆ ಸರಿಯಾದ ತೀರ್ಮಾನ ಆಗದಿದ್ದರೆ ನಾವೇನು ಮಾಡಬೇಕು ?

ಶ್ರೀ ಎಂ. ಪಿ. ನಾನಯ್ಯ.—ಕೋರ್ಟಿನಲ್ಲಿ ಕೊಡತಕ್ಕ ತೀರ್ಮಾನ ಸಾರ್ವಜನಿಕ ದೃಷ್ಟಿಯಿಂದ ಸರಿಯಾದುದಲ್ಲವೆಂದು ಹೇಳುತ್ತೀರಾ ?

ಶ್ರೀ ಸಿ.ಎಂ. ಇಬ್ರಾಹಿಂ.—ಎರಡನೆಯ ವಿಷಯ, ಮಾನ್ಯ ಸದಸ್ಯರು ಇವರಿಗೆ ಪರಿಹಾರ ಕೊಡಿಸುವ ಬಗ್ಗೆ, ಕಾರ್ಮಿಕರನ್ನು ಮತ್ತು ಮಾಲೀಕರನ್ನು ಕರೆಯಿಸಿ ಎಂದು ಹೇಳುತ್ತಿದ್ದಾರೆ. ಮತ್ತು ಮಾಲೀಕರು ಇವರಿಗೆ ಪರಿಹಾರ ಕೊಡುವುದಕ್ಕೆ ತಯಾರಾಗಿದ್ದಾರೆಂದು ಹೇಳಿದ್ದಾರೆ. ಪರಿಹಾರ ಕೊಡುವುದಕ್ಕೆ ಕಾನೂನು ಅಡ್ಡಿಯಾಗುತ್ತದೆ, ಇವರಿಗೆ ಪ್ರಾವಿಡೆಂಟ್‌ಫಂಡ್ ಕೊಡುವುದು ಏನು ಇದೆ ಅದನ್ನು ಕೊಡಿಸುವ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಸದನದಲ್ಲಿ ಕಳೆದ ಎರಡು ಮೂರು ದಿವಸದಿಂದ ಚರ್ಚೆ ನಡೆಯುತ್ತಿದೆ. ನಾಳೆಯದಿವಸ ಕೋರ್ಟಿನ ತೀರ್ಮಾನ ಆದಮೇಲೆ ಆದಷ್ಟು ಬೇಗ ಇದರ ಬಗ್ಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡಿ ಅದನ್ನು ಮಾಡುತ್ತೇವೆ. ನಾವೇ ಇದನ್ನು ತೆಗೆದುಕೊಂಡು ನಡೆಸಬೇಕು ಎನ್ನುವ ಮಾತನ್ನು ಕೆಲವು ಸದಸ್ಯರು ಹೇಳಿದರು. ನಾವು ಇದನ್ನು ನಡೆಸಬೇಕಾದರೆ, ಸರ್ಕಾರಕ್ಕೆ ಸುಮಾರು ೨೨ ಲಕ್ಷ ರೂಪಾಯಿಗಳ ಬಿರ್ಚು ಬರುತ್ತದೆ. ಇದರಲ್ಲಿ ಅನೇಕ ಎಡರು ತೊಡರುಗಳು ಇವೆ. ಮಾನ್ಯ ಸದಸ್ಯರು ನಮಗೆ ಸ್ವಲ್ಪ ಕಾಲಾವಕಾಶ ಕೊಟ್ಟರೆ ನಾನು ಸದನದಲ್ಲಿ ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಯುಕ್ತ ಕರ್ನಾಟಕ ದಿನಪತ್ರಿಕೆಯನ್ನು ಪುನರ್ ಪ್ರಾರಂಭಿಸುವುದಕ್ಕೆ ತಾವು ಏನನ್ನೂ ಹೇಳಲಿಲ್ಲ. ಇದು ಬಹಳ ಮುಖ್ಯವಾದ ವಿಚಾರ. ಕೋರ್ಟಿನಲ್ಲಿ ಇದರ ಬಗ್ಗೆ ಕೇಸ್ ಇದೆ. ಆದರೆ ನಾವು ಇದರ ಬಗ್ಗೆ ಒಂದು ದಾರಿಯನ್ನು ಹುಡುಕಲೇ ಬೇಕು. ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಿದರೆ ಇದಕ್ಕೆ ದಾರಿ ಸಿಕ್ಕೇ ಸಿಕ್ಕುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಗುರುವಾರ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಸದಸ್ಯರು ಕೆಲವು ಸಂದರ್ಭದಲ್ಲಿ ಮಾತನಾಡಬೇಕಾದಂಥ ಸಂದರ್ಭದಲ್ಲಿ ಕೆಲವರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅಂತೆಯೇ ಕುಮಾರಿ ಪ್ರಮಿಳಾ ಅವರು ಸ್ಲಮ್ಸ್ ಡ್ವೆಲ್ಲರ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಬಿ. ಭಾಸ್ಕರ್ ನಾಯಿಡು.—ಸಭೆಯಲ್ಲಿ ಕೋರಂ ಇಲ್ಲ.

ಶ್ರೀ ಎಂ. ಸಿ. ನಾನಯ್ಯ.—ಅವರು ಪ್ರಸ್ತಾಪ ಮಾಡಿದಂಥ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಬಂದ ನಂತರ ಕೆಲವರು ಇವರ ಮನೆಯ ಮುಂದೆ ಸತ್ಯಾಗ್ರಹ ಮಾಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ. ಮತ್ತು ಸದಸ್ಯರ ಹಕ್ಕುಭಾದ್ಯತೆಗೆ ಚ್ಯುತಿ ಬರುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಕುಮಾರಿ ಪ್ರಮಿಳ ಅವರ ಎಫಿಜಿಯನ್ನು ಬರ್ನ್ ಮಾಡುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಇಂತಹ ಘಟನೆಗಳನ್ನು ನಡೆಯದ ಹಾಗೆ ಸರ್ಕಾರದವರು ಸದಸ್ಯರಿಗೆ ಪ್ರೊಟೆಕ್ಷನ್ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ಒಳ್ಳೆಯ ವಿಚಾರವನ್ನು ತಂದಿದ್ದಾರೆ. ಕುಮಾರಿ ಪ್ರಮಿಳ ಅವರಿಗೆ ಕಾನೂನು ಪ್ರಕಾರ ರಕ್ಷಣೆ ಕೊಡುತ್ತೇವೆ ಇದರ ಬಗ್ಗೆ ಮಾನ್ಯ ಸದಸ್ಯರು ಯಾವ ಭಯವನ್ನು, ಸಂಶಯವನ್ನು ಇಟ್ಟುಕೊಳ್ಳಬಾರದು ಎಂದು ಸಭೆಯ ಮುಖೇನ ಸದಸ್ಯರಿಗೆ ತಿಳಿಸುತ್ತೇವೆ.

ಚೇರ್ಮನ್.—ಈಗ ಸಭೆಯು ಎಂದು ದಿನಾಂಕ ೨೫ನೇ ಜೂನ್ ೧೯೮೦ ರಂದು ಒಂದು ಗಂಟೆಗೆ ಸೇರುತ್ತದೆ.

The House adjourned at Fifteen minutes past two of the Clock to meet again at One of the Clock on Thursday the 19th June 1980.

WD 2684